**ಕರ್ನಾಟಕಸರ್ಕಾರ**

**ರಾಷ್ಟ್ರೀಯ ಸೇವಾ ಯೋಜನೆ**

**ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

ಸಂಖ್ಯೆ: ಪಪೂಶಿಇ/ರಾಸೇಯೋ/91/2018-19 ದಿನಾಂಕ:22-10-2018

**ವಿಷಯ:**ದಿನಾಂಕ 26.10.2018 ರಿಂದ 31.10.2018ರವರೆಗೆ ನಡೆಯಲಿರುವ ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರಕ್ಕೆ ಎನ್.ಎಸ್.ಎಸ್. 05 ಸ್ವಯಂ ಸೇವಕರನ್ನು ನೀಯೋಜಿಸುವ ಬಗ್ಗೆ

**ಉಲ್ಲೇಖ:** ಯುಸೇಇ/ರಾಸೇಯೋ/2018-19/273 ದಿನಾಂಕ : 22-10-2018

***

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕನ್ನಡ ಜಾನಪದ ಪರಿಷತ್ ಸಹಯೋಗದಲ್ಲಿ ಜಾನಪದ ತರಬೇತಿ ಶಿಬಿರವನ್ನು ಸಹ ಕುಂಬಳಗೋಡು ಯುವಜನ ತರಬೇತಿ ಕೇಂದ್ರ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ. ಸದರಿ ಶಿಬಿರವು ದಿನಾಂಕ : 26.10.2018 ರಿಂದ 31.10.2018 ರವರೆಗೆ ನಡೆಯಲಿದೆ. ಜಾನಪದ ತರಬೇತಿ ಶಿಬಿರದಲ್ಲಿ ಜನಪದ ಕಲೆಗಳಲ್ಲಿ ನಿಪುಣರಾದ ತರಬೇತುದಾರರಿಂದ ವಿವಿಧ ಜನಪದ ಕಲಾಪ್ರಕಾರಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಡೊಳ್ಳು ಕುಣಿತ, ವೀರಗಾಸೆ, ತಮಟೆ ವಾದ್ಯ, ಜನಪದ ಗೀತೆ, ಲಾವಣಿ, ಗೀಗೀಪದ, ರಾಗೀ ಬೀಸುವ ಪದ, ಸೋಬಾನೆ ಪದ, ಕೋಲಾಟ, ಕಂಸಾಳೆ, ಪಟ ಕುಣಿತ ಹಾಗೂ ಇತರೆ ಕಲಾ ಪ್ರಕಾರಗಳಲ್ಲಿ ಉಚಿತವಾಗಿ ತರಬೇತಿಯನ್ನು ನೀಡಲಾಗುವುದು. ಭಾಗವಹಿಸುವ ಶಿಬಿರಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಿ ಪ್ರಮಾಣ ಪತ್ರ ವಿತರಿಸಿ, ಪ್ರಯಾಣ ಭತ್ಯೆ ನೀಡಲಾಗುವುದು.

ಸದರಿ ಶಿಬಿರಕ್ಕೆ ತಮ್ಮ ಕಾಲೇಜಿನ 5 ಸ್ವಯಂ ಸೇವಕರನ್ನು ದಿನಾಂಕ : 26.10.2018 ರಂದು ಸಂಜೆ 6.00 ಗಂಟೆಯೊಳಗೆ ಜಾನಪದ ತರಬೇತಿ ಶಿಬಿರ, ಕುಂಬಳಗೋಡು ಯುವಜನ ತರಬೇತಿ ಕೇಂದ್ರ, ಮೈಸೂರು ರಸ್ತೆ, ಬೆಂಗಳೂರು ಶಿಬಿರ ನಡೆಯುವ ಸ್ಥಳದಲ್ಲಿ ಹಾಜರಿರುವಂತೆ ಸೂಚಿಸಿ ಬಿಡುಗಡೆ ಮಾಡಲು ಕೋರಿದೆ. ಹೆಚ್ಚಿನ ವಿವರಗಳಿಗೆ ಶಿಬಿರಾಧಿಕಾರಿಗಳಾದ ಡಾ.ಎಸ್.ಬಾಲಾಜಿ, ಕಾರ್ಯಾಧ್ಯಕ್ಷರು, ಕನ್ನಡ ಜನಪದ ಪರಿಷತ್, ಬೆಂಗಳೂರು, ಇವರ ದೂರವಾಣಿ ಸಂಖ್ಯೆ:9900774442 ಸಂಪರ್ಕಿಸಲು ಹಾಗೂ ಇ-ಮೇಲ್ ವಿಳಾಸ: ddyssbangaloreurban12@gmail.com ಗೆ ನೊಂದಣಿ ಪಟ್ಟಿಯನ್ನು ದಿನಾಂಕ:25.10.2018ರಂದು ಸಂಜೆ 5.30ರೊಳಗೆ ಕಳುಹಿಸಿಕೊಡಲು ಕೋರಿದೆ.

ತಮ್ಮ ವಿಶ್ವಾಸಿ,

**ಸಂಯೋಜನಾಧಿಕಾರಿಗಳು,**
**ರಾಷ್ಟ್ರೀಯ ಸೇವಾ ಯೋಜನೆ ಕೋಶ,**
**ಪ.ಪೂ.ಶಿ.ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.**

ಪ್ರತಿಗಳು

1. ಪ್ರಾಂತೀಯ ನಿರ್ದೇಶಕರು ಎನ್.ಎಸ್.ಎಸ್ ಕೋಶ ಬೆಂಗಳೂರು
2. ಡಾ: ಗಣನಾಥ ಶೆಟ್ಟಿ, ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,ಎನ್.ಎಸ್.ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
3. ಎಂ ಇ ಎಸ್ ಪದವಿ ಪೂರ್ವ ಕಾಲೇಜು ವಿದ್ಯಾರಣ್ಯಪುರ ಬೆಂಗಳೂರು .
4. ಎಸ್ ವಿ ಬಿ ಪಾಟೀಲ್ ಪದವಿ ಪೂರ್ವ ಕಾಲೇಜು ಸರ್ಜಾಪುರ ಬೆಂಗಳೂರು .
5. ಜ್ಞಾನ ಸರೋವರ ಪದವಿ ಪೂರ್ವ ಕಾಲೇಜು ಚನ್ನಪಟ್ಟಣ ಬೆಂಗಳೂರು .
6. ಬಾಲಾಜಿ ಪದವಿ ಪೂರ್ವ ಕಾಲೇಜು ಹನುಮಂತ ನಗರ ಬೆಂಗಳೂರು .
7. ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
8. ಕಛೇರಿ ಪತಿ.